# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 340 |
| ಸದಸ್ಯರ ಹೆಸರು | : | ಶ್ರೀ ಕೆ.ಎ.ತಿಪ್ಪೇಸ್ವಾಮಿ, (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 11-12-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದ ಘಟ್ಟ ಪ್ರದೇಶಗಳಲ್ಲಿರುವ ಘಾಟ್‌ಗಳು ಯಾವುವು ಮತ್ತು ಈ ಘಾಟ್‌ಗಳು ಮುಖೇನ ಹಾದು ಹೋಗುವ ರಾಜ್ಯ ಹೆದ್ದಾರಿ ಮತ್ತು ರಾಷ್ಟೀಯ ಹೆದ್ದಾರಿಗಳು ಯಾವುವು; ಮತ್ತು ಈ ಹೆದ್ದಾರಿಗಳ ಅಭಿವೃದ್ಧಿ ಮತ್ತು ಸುಧಾರಣೆಗಳನ್ನು ನಿರ್ವಹಣೆ ಮಾಡುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇಲಾಖೆ ಮತ್ತು ಪ್ರಾಧಿಕಾರಗಳು ಯಾವುವು; (ಪೂರ್ಣ ಮಾಹಿತಿ ನೀಡುವುದು) | ರಾಜ್ಯದ ಘಟ್ಟ ಪ್ರದೇಶಗಳು, ಈ ಘಾಟ್‌ಗಳ ಮುಖೇನ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳು ಹಾಗೂ ಈ ಹೆದ್ದಾರಿಗಳ ಅಭಿವೃದ್ಧಿ ಮತ್ತು ಸುಧಾರಣೆಗಳನ್ನು ಮಾಡುವ ಪ್ರಾಧಿಕಾರಗಳ ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದಲ್ಲಿರುವ ಈ ಘಾಟ್ ರಸ್ತೆಗಳು ಮಲೆನಾಡು ಮತ್ತು ಕರಾವಳಿ ನಡುವಣ ಸಂಪರ್ಕ ಸೇತುವೆಗಳಾಗಿರುವುದು ಹಾಗೂ ಈ ಘಾಟ್ ರಸ್ತೆಗಳಿಗೆ ಸರಿಯಾದ ರಸ್ತೆ ಅಭಿವೃದ್ಧಿ ಮತ್ತು ನಿರ್ವಹಣೆ ಇಲ್ಲದ ಮಳೆಗಾಲದಲ್ಲಿ ಭೂ-ಕುಸಿತದಿಂದ ರಸ್ತೆಗಳು ಬಂದ್ ಆಗಿ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ : | ರಾಜ್ಯದಲ್ಲಿರುವ ಕೆಲವೊಂದು ಘಾಟ್‌ಗಳ ಕೆಲವು ಭಾಗಗಳಲ್ಲಿ ಮಳೆಗಾಲದಲ್ಲಿ ಭೂ-ಕುಸಿತದಿಂದ ರಸ್ತೆಗಳು ಬಂದ್ ಆಗಿ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಇ) | ಹಾಗಿದ್ದಲ್ಲಿ ಈ ಘಾಟ್ ರಸ್ತೆಗಳು ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಸುಧಾರಣೆ ಕ್ರಮಗಳು ಯಾವುವು ? (ಭೌತಿಕ ಮತ್ತು ಆರ್ಥಿಕ ಗುರಿ ಮತ್ತು ಸಾಧನೆ ಒಳಗೊಂಡಂತೆ ವರ್ಷವಾರು ಪೂರ್ಣ ಮಾಹಿತಿ ನೀಡುವುದು) | ಘಾಟ್ ರಸ್ತೆಗಳು ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಸುಧಾರಣೆ ಕ್ರಮಗಳ ಮಾಹಿತಿಯನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |

ಸಂಖ್ಯೆ: ಲೋಇ 316 ಸಿಎನ್‌ಹೆಚ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

# ಅನುಬಂಧ-1

**ರಾಜ್ಯದ ಘಟ್ಟ ಪ್ರದೇಶಗಳು, ಈ ಘಾಟ್‌ಗಳ ಮುಖೇನ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳು ಹಾಗೂ ಈ ಹೆದ್ದಾರಿಗಳ ಅಭಿವೃದ್ಧಿ ಮತ್ತು ಸುಧಾರಣೆಗಳನ್ನು ಮಾಡುವ ಪ್ರಾಧಿಕಾರಗಳ ವಿವರ**

## ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ:

| ಕ್ರಮ ಸಂಖ್ಯೆ | ಘಾಟ್‌ನ ಹೆಸರು | ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ | | ಪ್ರಾಧಿಕಾರ | ಕೈಗೊಂಡಿರುವ ಅಭಿವೃದ್ಧಿ /ಸುಧಾರಣೆ ಕಾಮಗಾರಿಗಳ ವಿವರ |
|---|---|---|---|---|---|
| | | ಸಂಖ್ಯೆ | ಉದ್ದ | | |
| 1 | ಶಿರಾಡಿ ಘಾಟ್ | **NH-75** (ಕಿ.ಮೀ 237.00 ರಿಂದ ಕಿ.ಮೀ 263.00 ರವರೆಗೆ) | 26.00 | ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ | ಕಿ.ಮೀ.237.00 ರಿಂದ 263.00 ವರೆಗೆ (ಮಾರನಹಳ್ಳಿಯಿಂದ-ಅಡ್ಡಹೊಳೆ) 2018-19 ಸಾಲಿನಲ್ಲಿ ಸುರಿದ ಭಾರಿ ಮಳೆಗೆ ಭೂಕುಸಿತವಾಗಿರುವ ಸುಮಾರು 21 ಸ್ಥಳಗಳಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿರುತ್ತದೆ.<br><br>ಹಾಸನದಿಂದ-ಮಾರನಹಳ್ಳಿ ರವರೆಗೆ 8.00 ಕಿ.ಮೀ. ಉದ್ದದ ರಸ್ತೆಯನ್ನು 2 ಪಥದಿಂದ 4 ಪಥಕ್ಕೆ ಅಭಿವೃದ್ಧಿ ಪಡಿಸುತ್ತಿದ್ದು, ಶೇ. 80 ರಷ್ಟು ಭೌತಿಕ ಪ್ರಗತಿ ಯಾಗಿರುತ್ತದೆ. |
| 2 | ಅನ್ಮೋಡ್ ಘಾಟ್ | **NH-4A** ಖಾನಾಪುರ-KA/GOA ಗಡಿ ಸೆಕ್ಷನ್ | 1.50 | ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ | ಗಟ್ಟಿಬಾಹುಗಳೊಂದಿಗೆ ದ್ವಿಪಥ ರಸ್ತೆಗೆ ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು 53.11% ಭೌತಿಕ ಪ್ರಗತಿ ಸಾಧಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |
| 3 | ಚೋರ್ಲಾ ಘಾಟ್ | NH-748 AA ರ ಬೆಳಗಾವಿ-ಚೋರ್ಲಾ ಸೆಕ್ಷನ್ | | ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ | NHAI ಮಾಡಿರುವ ಠೇವಣಿಯಲ್ಲಿ ರಾಷ್ಟ್ರೀಯ ಹೆದ್ದಾರಿ ವಿಭಾಗದಿಂದ ನಿರ್ವಹಣೆ ಮಾಡಲಾಗುತ್ತಿದೆ. |
| 4 | ದೇವಿಮನೆ ಘಾಟ್ & ಬಂದಲ್ ಘಾಟ್ | NH-766E ರ ಬೇಲೇಕೇರಿ/ಕುಮಟಾ ದಿಂದ ಸಿರಸಿ ಸೆಕ್ಷನ್ | 7.50 & 1.40 ಕಿ.ಮೀ. | ಭಾರತೀಯ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ | ಗಟ್ಟಿಬಾಹುಗಳೊಂದಿಗೆ ದ್ವಿಪಥ ರಸ್ತೆಗೆ ಮೇಲ್ದರ್ಜೆಗೇರಿಸುವ ಕಾಮಗಾರಿಯನ್ನು 59.65% ಭೌತಿಕ ಪ್ರಗತಿ ಸಾಧಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

## ರಾಷ್ಟ್ರೀಯ ಹೆದ್ದಾರಿಗಳ ದಕ್ಷಿಣ ವಲಯ, ಬೆಂಗಳೂರು:

| ಕ್ರಮ ಸಂಖ್ಯೆ | ಘಾಟ್‌ನ ಹೆಸರು | ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ | | ಪ್ರಾಧಿಕಾರ | ಕೈಗೊಂಡಿರುವ ಅಭಿವೃದ್ಧಿ /ಸುಧಾರಣೆ ಕಾಮಗಾರಿಗಳ ವಿವರ |
|---|---|---|---|---|---|
| | | ಸಂಖ್ಯೆ | ಉದ್ದ | | |
| 1 | ಸಂಪಾಜೆ ಘಾಟ್ | **NH-275** ಕಿ.ಮೀ.71.600 ರಿಂದ 110.00 ರವರೆಗೆ | 38.40 | ಕೇಂದ್ರ ಭೂಸಾರಿಗೆ ಇಲಾಖೆ & ರಾಷ್ಟ್ರೀಯ ಹೆದ್ದಾರಿ, ಬೆಂಗಳೂರು | ರಸ್ತೆಗಳಲ್ಲಿ ಮಳೆಗಾಲ ಪೂರ್ವ/ ಮಳೆಗಾಲದಲ್ಲಿ ನಿರಂತರವಾಗಿ ಜಂಗಲ್ ತೆಗೆಯುವುದು, ಚರಂಡಿ ಸ್ವಚ್ಛ ಗೊಳಿಸುವುದು ಇತ್ಯಾದಿ ನಿರ್ವಹಣೆ (STMC) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳ ಲಾಗಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಯಾವುದೇ ರೀತಿಯಲ್ಲೂ ತೊಂದರೆ ಆಗದಂತೆ ಕ್ರಮವಹಿಸ ಲಾಗಿರುತ್ತದೆ/ಈಗಲೂ ಸಹ ಕ್ರಮವಹಿಸ ಲಾಗುತ್ತಿದೆ. ಪ್ರಸ್ತುತ ಗುಂಡಿ ಮುಚ್ಚುವ ಕಾಮಗಾರಿಯು ಸಹ ಪ್ರಗತಿಯಲ್ಲಿರುತ್ತದೆ. |
| 2 | ಆಗುಂಬೆ ಘಾಟ್ | **NH-169A** ಕಿ.ಮೀ 33.00 ರಿಂದ 41.00 ರವರೆಗೆ | 8.00 | | |
| 3 | ನಿಟ್ಟೂರು (ನಾಗೋಡಿ ಘಾಟ್) | **NH-766C** ಕಿ.ಮೀ.28.00 ರಿಂದ 43.40 ರವರೆಗೆ | 15.40 | | |
| 4 | ಮಾಳಾ ಘಾಟ್ | **NH-169** ಕಿ.ಮೀ 123.00 ರಿಂದ 153.00 ರವರೆಗೆ | 30.00 | | |
| 5 | ಚಾರ್ಮಾಡಿ ಘಾಟ್ | **NH-73 (234)** ಕಿ.ಮೀ.75.00 ರಿಂದ 86.20 ಒಟ್ಟು 11.20 ಕಿ.ಮೀ. ಹಾಗೂ ಕಿ.ಮೀ. 86.20 ರಿಂದ 99.20 ರವರೆಗೆ ಒಟ್ಟು 13.00ಕಿ.ಮೀ | 24.20 | | ಸದರಿ ರಸ್ತೆಯ ಕಿ.ಮೀ.86.200 ರಿಂದ 99.200 ವರೆಗೆ ಇ.ಪಿ.ಸಿ ಮೋಡ್‌ನಲ್ಲಿ ಕಣಿವೆ ಬದಿಯ 7 ಸ್ಥಳಗಳಲ್ಲಿ ರಸ್ತೆ ಕುಸಿತಗಳಿಗೆ ತಡೆಗೋಡೆ ನಿರ್ಮಾಣದ ಶಾಶ್ವತ ಮರು ಸ್ಥಾಪನೆಯನ್ನು ಒದಗಿಸುವ ಕಾಮಗಾರಿ ಕೈಗೊಳ್ಳಲಾಗಿರುತ್ತದೆ. |
| 6 | ಶಿರಾಡಿ ಘಾಟ್ | **NH-75** (ಕಿ.ಮೀ 237.00 ರಿಂದ ಕಿ.ಮೀ 263.00 ರವರೆಗೆ) | 26.00 | | ಕಿ.ಮೀ.237.00 ರಿಂದ 263.00 ವರೆಗೆ (ಮಾರನಹಳ್ಳಿಯಿಂದ-ಅಡ್ಡಹೊಳೆ) 2018-19 ಸಾಲಿನಲ್ಲಿ ಸುರಿದ ಭಾರಿ ಮಳೆಗೆ ಭೂಕುಸಿತವಾಗಿರುವ ಸುಮಾರು 21 ಸ್ಥಳಗಳಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿರುತ್ತದೆ. |

# ಸಂಪರ್ಕ ಮತ್ತು ಕಟ್ಟಡಗಳು, ಉತ್ತರ ವಲಯ, ಧಾರವಾಡ:

| ಕ್ರಮ ಸಂಖ್ಯೆ | ಘಾಟ್‌ನ ಹೆಸರು | ಹಾದು ಹೋಗುವ ಹೆದ್ದಾರಿಗಳ ಸಂಖ್ಯೆ | ಉದ್ದ | ಪ್ರಾಧಿಕಾರ | ಕೈಗೊಂಡಿರುವ ಅಭಿವೃದ್ಧಿ /ಸುಧಾರಣೆ ಕಾಮಗಾರಿಗಳ ವಿವರ |
|---|---|---|---|---|---|
| 1 | ಅಣಶಿ ಘಾಟ್ | **SH-34** ಔರಾದ–ಸದಾಶಿವಗಡ ರಸ್ತೆ | ಕಿ.ಮೀ 682.56 ರಿಂದ 687.82 ಕಿ.ಮೀ | ಸಂಪರ್ಕ ಮತ್ತು ಕಟ್ಟಡಗಳು, ಉತ್ತರ ವಲಯ, ಧಾರವಾಡ | ವಾರ್ಷಿಕ ನಿರ್ವಹಣೆ ಕೈಗೊಳ್ಳಲಾಗುತ್ತಿದೆ (2023-24ನೇ ಸಾಲಿನ CRIF ಅಡಿ ರೂ.6.00 ಕೋಟಿ ಅನುದಾನ ಮಂಜೂರಾಗಿರುತ್ತದೆ |
| 2 | ವಡ್ಡಿಘಾಟ್ | **SH-143** | ಕಿ.ಮೀ 41.00 ರಿಂದ 47.15 ಕಿ.ಮೀ | | ಕಿ.ಮೀ 41.00 ರಿಂದ 46.40 ರ ವರೆಗೆ 5.4 ಕಿ.ಮೀ SHDP ಯೋಜನೆ ಅಡಿ ಕಾಂಕ್ರೀಟ್ ರಸ್ತೆ 5.5 ಮೀ ಅಗಲಕ್ಕೆ ಅಭಿವೃದ್ಧಿ ಪಡಿಸಿರುತ್ತಾರೆ. |
| 3 | ದೊಡ್ಮನೆಘಾಟ್ | **SH-48** | ಕಿ.ಮೀ 42.55 ರಿಂದ 46.50 ಕಿ.ಮೀ | | 2012-13 ನೇ ಸಾಲಿನ ರಾಜ್ಯ ಹೆದ್ದಾರಿ ಸುಧಾರಣೆಯಡಿ ಕಿ.ಮೀ 40.65 ರಿಂದ 42.55 ರವರೆಗೆ ಕಾಂಕ್ರೀಟ ರಸ್ತೆ ಅಭಿವೃಧಿ ಪಡಿಸಿರುತ್ತಾರೆ. 2015-16 ಸಾಲಿನ SHDP ಯೋಜನೆ ಅಡಿ ಕಿ.ಮೀ. 30.00 ರಿಂದ 38.00 ರವರೆಗೆ ಅಭಿವೃದ್ಧಿ ಪಡಿಸಿರುತ್ತಾರೆ.<br><br>2017-18 ಸಾಲಿನ 5054 ರಾ.ಹೆ ಸುಧಾರಣೆ ಅಡಿ ಕಿ.ಮೀ 38.125 ರಿಂದ 40.00 ರವರೆಗೆ ಮರು ಡಾಂಬರೀಕರಣ ಹಾಗೂ ಕಿ.ಮೀ 38.00 ರಲ್ಲಿ ಸೇತುವೆ ನಿಮಾಣ. |
| 4 | ಬಡಾಳಘಾಟ್ | **SH-48** | ಕಿ.ಮೀ 42.55 ರಿಂದ 46.50 ಕಿ.ಮೀ | | ವಾರ್ಷಿಕ ನಿರ್ವಹಣೆ ಕೈಗೊಳ್ಳಲಾಗುತ್ತಿದೆ |
| 5 | ಮುಳ್ಳೂರು ಘಾಟ್ | **SH-34** ಔರಾದ–ಸದಾಶಿವಗಡ ರಸ್ತೆ | ಕಿ.ಮೀ 470.00 ರಿಂದ 471.00 ಕಿ.ಮೀ | | ಮುಳ್ಳೂರು ಘಾಟ ಮತ್ತು ಮುದಕವಿ ಘಾಟ ಈ ಎರಡನ್ನು KSHIP-2 ಇಲಾಖೆ ಬೆಂಗಳೂರು ಇವರಿಂದ ದ್ವಿಪಥ ರಸ್ತೆ ನಿರ್ಮಾಣ ಮಾಡಲಾಗಿರುತ್ತದೆ. ಭೌತಿಕ ಮತ್ತು ಆರ್ಥಿಕ ಗುರಿ & ಸಾಧನೆ ಒಳಗೊಂಡಂತೆ ವರ್ಷವಾರು ಪೂರ್ಣ ಮಾಹಿತಿಯನ್ನು ಮೇಲಿನ ಸಂಬಂಧಪಟ್ಟ ಇಲಾಖೆಯಿಂದ ಪಡೆಯಲು ವಿನಂತಿಸಲಾಗಿದೆ. |
| 6 | ಮುದಕವಿ ಘಾಟ್ | **SH-14** ರಾಮದುರ್ಗ–ಮಾನಿ ರಸ್ತೆ | ಕಿ.ಮೀ 1.60 ರಿಂದ 2.20 | | |
| | ಬಾಳೆಕುಂದ್ರಿ ಘಾಟ್ | **SH-34** ಔರಾದ–ಸದಾಶಿವಗಡ ರಸ್ತೆ | ಕಿ.ಮೀ 455.90 ರಿಂದ 456.50 ಹಾಗೂ 458.20 ರಿಂದ 459.60 ಕಿ.ಮೀ | | ಬಾಳೆಕುಂದ್ರಿ ಘಾಟನ್ನು PRAMC ಬೆಂಗಳೂರು ರವರಿಂದ 2018 ರಲ್ಲಿ ಅಂದಾಜು ಮೊತ್ತ 300.00 ಲಕ್ಷಗಳಿಗೆ ಚತುಷ್ಪಥ ರಸ್ತೆ ನಿರ್ಮಾಣ ಮಾಡಲಾಗಿರುತ್ತದೆ. |
| 8 | ಸವದತ್ತಿ–ಯಲ್ಲಮ್ಮನಗುಡ್ಡ ರಸ್ತೆ ಘಾಟ್ | **NH-4(a) ರಿಂದ SH-56** | ಕಿ.ಮೀ 127.64 ರಿಂದ 128.64 ಕಿ.ಮೀ | | ಸವದತ್ತಿ-ಯಲ್ಲಮ್ಮನಗುಡ್ಡ ಘಾಟ ರಸ್ತೆಯನ್ನು PIU/SHDP/PH-4/STAGE-2/PKG-498(A) &(C)/BELAGAVI/2021-22 ರಲ್ಲಿ ರೂ.12.50 ಕೋಟಿಗಳ ಅನುದಾನದಲ್ಲಿ ಸುಧಾರಣೆ |

## ರಾಷ್ಟ್ರೀಯ ಹೆದ್ದಾರಿಗಳ ಉತ್ತರ ವಲಯ, ಬೆಳಗಾವಿ:

| ಕ್ರಮ ಸಂಖ್ಯೆ | ಘಾಟ್‌ನ ಹೆಸರು | ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ | | ಪ್ರಾಧಿಕಾರ | ಕೈಗೊಂಡಿರುವ ಅಭಿವೃದ್ಧಿ /ಸುಧಾರಣೆ ಕಾಮಗಾರಿಗಳ ವಿವರ |
|---|---|---|---|---|---|
| | | ಸಂಖ್ಯೆ | ಉದ್ದ | | |
| 1 | ಅರಬೈಲ ಘಾಟ್ | NH-52 | ಕಿ.ಮೀ 336.696 ರಿಂದ 352.696 ರವರೆಗೆ (16 ಕಿ.ಮೀ) | ಕೇಂದ್ರ ಭೂಸಾರಿಗೆ ಇಲಾಖೆ ರಾಷ್ಟ್ರೀಯ ಹೆದ್ದಾರಿಗಳ ಉತ್ತರ ವಲಯ, ಬೆಳಗಾವಿ: | 2023-24 ನೇ ಸಾಲಿನಲ್ಲಿ ಹೆದ್ದಾರಿ-52 ರಲ್ಲಿ ಅರಬೈಲ ಘಾಟ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರದಿಂದ ರೂ.31.90 ಕೋಟಿ ಮೊತ್ತದ ಅನುದಾನ ದೊರೆತಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಮಾರ್ಚ-2025 ರವರೆಗೆ 10 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗುವುದು. |
| 2 | ಗೇರುಸೊಪ್ಪ ಘಾಟ್ | NH-69 | ಕಿ.ಮೀ 33.40 ರಿಂದ 54.00 ರವರೆಗೆ (20.06 ಕಿ.ಮೀ) | | 2024-25ನೇ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿ-69 ರಲ್ಲಿ ಗೇರುಸೊಪ್ಪ ಘಾಟಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರದಿಂದ ರೂ.50.08 ಕೋಟಿ ಮೊತ್ತದ ಅನುದಾನ ದೊರೆತಿದ್ದು, ಕಾಮಗಾರಿಯು ಟೆಂಡರ್ ಹಂತದಲ್ಲಿದೆ. |

## ಸಂಪರ್ಕ ಮತ್ತು ಕಟ್ಟಡಗಳು, ಕೇಂದ್ರ ವಲಯ, ಶಿವಮೊಗ್ಗ:

| ಕ್ರಮ ಸಂಖ್ಯೆ | ಘಾಟ್‌ನ ಹೆಸರು | ಹಾದು ಹೋಗುವ ಹೆದ್ದಾರಿಗಳ | | ಪ್ರಾಧಿಕಾರ | ಕೈಗೊಂಡಿರುವ ಅಭಿವೃದ್ಧಿ /ಸುಧಾರಣೆ ಕಾಮಗಾರಿಗಳ ವಿವರ |
|---|---|---|---|---|---|
| | | ಸಂಖ್ಯೆ | ಉದ್ದ | | |
| 1 | **ಬಾಳೆಬರೆ ಘಾಟ್:** | **SH-52** ತೀರ್ಥಹಳ್ಳಿ–ಕುಂದಾಪುರ ರಸ್ತೆ | 5.90 ಕಿಮೀ. | ಸಂಪರ್ಕ ಮತ್ತು ಕಟ್ಟಡಗಳು, ಕೇಂದ್ರ ವಲಯ, ಶಿವಮೊಗ್ಗ | ಶಿವಮೊಗ್ಗ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಹಾದುಹೋಗುತ್ತದೆ. ಕಿಮೀ.20.40 ರಿಂದ 46.40 ರಲ್ಲಿ ಒಟ್ಟು 26.00 ಕಿ.ಮೀ. ಪೈಕಿ ಕಿಮೀ.40.50 ರಿಂದ 46.40 ವರೆಗೆ ಒಟ್ಟು 5.90 ಕಿ.ಮೀ. ಘಾಟಿ ರಸ್ತೆಯು ಸಂಪೂರ್ಣವಾಗಿ 7.00 ಮೀ ಅಗಲಕ್ಕೆ ಕಾಂಕ್ರೀಟ್ ರಸ್ತೆ ಭಾಗವಾಗಿರುವುದರಿಂದ ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. |
| | | | 6.60 ಕಿಮೀ. | | ಕಿಮೀ.46.40 ರಿಂದ 53.00 ವರೆಗೆ ಒಟ್ಟು 6.60 ಕಿ.ಮೀ. ಘಾಟಿ ರಸ್ತೆಯಾಗಿದ್ದು, ಇದರಲ್ಲಿ ಕಿಮೀ.46.40 ರಿಂದ 49.30 ರವರೆಗೆ ಒಟ್ಟು 2.90 ಕಿ.ಮೀ. ರಸ್ತೆಯು 7.00ಮೀ ಅಗಲಕ್ಕೆ ಕಾಂಕ್ರೀಟ್ ರಸ್ತೆಯಿದ್ದು, ಸುಸ್ಥಿತಿಯಲ್ಲಿರುತ್ತದೆ. ಹಾಗೂ ಕಿಮೀ.49.30 ರಿಂದ 53.00 ರವರೆಗೆ 3.70 ಕಿ.ಮೀ. ರಸ್ತೆಯು 5.50 ಮೀ ಅಗಲದ ಡಾಂಬರಿನ ರಸ್ತೆಯಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. |
| 2 | **ಕೋಗಾರ್ ಘಾಟ್:** | **SH-50** ಭಟ್ಕಳ–ಸೊರಬ ರಸ್ತೆ | 18.00 ಕಿಮೀ. | | ಶಿವಮೊಗ್ಗ ಜಿಲ್ಲೆಯಲ್ಲಿ ಹಾದುಹೋಗುತ್ತದೆ. ಸದರಿ ರಸ್ತೆಯ ಕಿಮೀ.30.00 ರಿಂದ 48.00 ವರೆಗಿನ ಒಟ್ಟು 5.77 ಕಿ.ಮೀ ಡಾಂಬರು ರಸ್ತೆಯಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. |
| 3 | **ಬಿಸ್ಲೇಘಾಟ್** | **SH-85** ಬೆಂಗಳೂರು–ಜಾಲ್ಸೂರು ರಸ್ತೆ | 4.680 ಕಿಮೀ. | | ಕಿ.ಮೀ.278.38 ರಿಂದ 283.20 ವರೆಗೆ 5.50 ಮೀಟರ್ ಅಗಲದ ರಸ್ತೆಯಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ. ಈ ಭಾಗದಲ್ಲಿ ಯಾವುದೇ ರೀತಿಯ ಭೂ ಕುಸಿತ ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗಿರುವುದಿಲ್ಲ. |

| | | | | | | |
|---|---|---|---|---|---|---|
| | | | | | | ಮಾಡಲಾಗಿರುತ್ತದೆ |
| 9 | ವಟ್ನಾಳ–ನವೀಲುತೀರ್ಥ ಡ್ಯಾಂ ಸೈಟ್–ಮುನವಳ್ಳಿ ಸೀತಾರಾಮ ಕ್ರಾಸ್ ಘಾಟ್ | SH-103 ಗೋಕಾಕ–ಸವದತ್ತಿ ರಸ್ತೆ | ಕಿ.ಮೀ 63.50 ರಿಂದ 64.50 ಕಿ.ಮೀ ಹಾಗೂ ಕಿ.ಮೀ 60.10 ರಿಂದ 61.10 ಕಿ.ಮೀ | | | ವಟ್ನಾಳ-ನವೀಲುತೀರ್ಥ ಡ್ಯಾಂ ಸೈಟ್-ಮುನವಳ್ಳಿ ಸೀತಾರಾಮ ಕ್ರಾಸ್ ಘಾಟಗಳಿರುವ ರಸ್ತೆಯನ್ನು 2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054 ರಾ.ಹೆ ಸುಧಾರಣೆ ಅಡಿಯಲ್ಲಿ ರೂ.9.00 ಕೋಟಿಗಳ ಅನುದಾನದಲ್ಲಿ ಸುಧಾರಣೆ ಮಾಡಲಾಗಿರುತ್ತದೆ. |
| 10 | ಗೊಂದಿ–ಬಡ್ಲಿ ಘಾಟ್ | SH-103 ಗೋಕಾಕ–ಸವದತ್ತಿ ರಸ್ತೆ | ಕಿ.ಮೀ 49.80 ರಿಂದ 51.80 ಕಿ.ಮೀ | | | ಗೊಂದಿ-ಬಡ್ಲಿ ಘಾಟ ರಸ್ತೆಯನ್ನು 2021-22ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5054 ರಾ.ಹೆ ಸುಧಾರಣೆ ಅಡಿಯಲ್ಲಿ ರೂ.4.00 ಕೋಟಿಗಳ ಅನುದಾನದಲ್ಲಿ ಸುಧಾರಣೆ ಮಾಡಲಾಗಿರುತ್ತದೆ. |

# ಅನುಬಂಧ-2

## ಘಾಟ್ ರಸ್ತೆಗಳು ಅಭಿವೃದ್ಧಿ ಮತ್ತು ನಿರ್ವಹಣೆಗಾಗಿ ಕೈಗೊಂಡಿರುವ ಸುಧಾರಣೆ ಕ್ರಮಗಳ ಮಾಹಿತಿ

### ರಾಷ್ಟ್ರೀಯ ಹೆದ್ದಾರಿ ದಕ್ಷಿಣ ವಲಯ:

1) ರಾಷ್ಟ್ರೀಯ ಹೆದ್ದಾರಿ ದಕ್ಷಿಣ ವಲಯಕ್ಕೆ ಸಂಬಂಧಪಟ್ಟಂತೆ ಶಿರಾಡಿ ಘಾಟ್ ಹಾಗೂ ಚಾರ್ಮಡಿ ಘಾಟ್ ರಸ್ತೆಗಳಲ್ಲಿ ಮಳೆಗಾಲ ಪೂರ್ವ/ ಮಳೆಗಾಲದಲ್ಲಿ ನಿರಂತರವಾಗಿ ಜಂಗಲ್ ತೆಗೆಯುವುದು, ಚರಂಡಿ ಸ್ವಚ್ಛಗೊಳಿಸುವುದು ಇತ್ಯಾದಿ ನಿರ್ವಹಣೆಗಾಗಿ PBMC ಮತ್ತು FDR ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ವಾಹನಗಳ ಸುಗಮ ಸಂಚಾರಕ್ಕೆ ಯಾವುದೇ ರೀತಿಯಲ್ಲೂ ತೊಂದರೆ ಆಗದಂತೆ ಕ್ರಮವಹಿಸಲಾಗಿರುತ್ತದೆ/ ಈಗಲೂ ಸಹ ಕ್ರಮವಹಿಸಲಾಗುತ್ತಿದೆ. ಪ್ರಸ್ತುತ ಗುಂಡಿ ಮುಚ್ಚುವ ಕಾಮಗಾರಿಯು ಸಹ ಪ್ರಗತಿಯಲ್ಲಿರುತ್ತದೆ.

2) ರಾಷ್ಟ್ರೀಯ ಹೆದ್ದಾರಿ-73 ಮಂಗಳೂರು-ತುಮಕೂರು ಸೆಕ್ಷನ್ ಕಿ.ಮೀ.86.200 ರಿಂದ ಕಿ.ಮೀ 99.200 (ಚಾರ್ಮಡಿ ಘಾಟ್) ವರೆಗೆ ಇ.ಪಿ.ಸಿ. ಮೋಡ್‌ನಲ್ಲಿ ಸದರಿ ಸ್ಥಳಗಳಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಕೇಂದ್ರ ಭೂಸಾರಿಗೆ ಇಲಾಖೆ ವತಿಯಿಂದ ರೂ.2158.20 ಲಕ್ಷಗಳ ಮೊತ್ತಕ್ಕೆ 2019-2020ನೇ ಸಾಲಿನಲ್ಲಿ ಮಂಜೂರಾಗಿದ್ದು, ಪ್ರಸ್ತುತ ಕಾಮಗಾರಿಯು ಪೂರ್ಣಗೊಂಡಿದ್ದು ಕಣಿವೆ ಬದಿಯ 7 ಸ್ಥಳಗಳಲ್ಲಿ Soil nailing with tie back system ಪದ್ಧತಿಯ ತಡೆಗೋಡೆಗಳನ್ನು ನಿರ್ಮಿಸಿದ್ದು ರಸ್ತೆ ಸುಗಮ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗಿರುತ್ತದೆ. ಸದರಿ ರಸ್ತೆಯು ಮುಂದಿನ ಹತ್ತು ವರ್ಷಗಳವರೆಗೆ ನಿರ್ವಹಣೆಯಲ್ಲಿರುತ್ತದೆ.

3) ರಾಷ್ಟ್ರೀಯ ಹೆದ್ದಾರಿ-73 ಹಾಗೂ ರಾಷ್ಟ್ರೀಯ ಹೆದ್ದಾರಿ-73 (Spur road) ಹೆದ್ದಾರಿಗಳನ್ನು ನಿರ್ವಹಿಸಲು ರೂ.1.82 ಕೋಟಿ ಮೊತ್ತಕ್ಕೆ 2023-24ನೇ ಸಾಲಿನ Short Term Maintenance Contract (STMC) ಯೋಜನೆಯಡಿ ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದಿಂದ ಅನುಮೋದನೆಗೊಂಡಿದ್ದು, ಸದರಿ ಕಾಮಗಾರಿಯಲ್ಲಿ ಚಾರ್ಮಾಡಿಘಾಟ್ ಭಾಗದ ನಿರ್ವಹಣೆ ಕಾಮಗಾರಿಗಳಾದ ಜಂಗಲ್ ತೆಗೆಯುವುದು, ಮೋರಿಗಳ ನಿರ್ವಹಣೆ ಹಾಗೂ ಗುಂಡಿ ಮುಚ್ಚುವ ಕಾರ್ಯಗಳು ಪ್ರಗತಿಯಲ್ಲಿದ್ದು ಸುಗಮ ವಾಹನ ಸಂಚಾರಕ್ಕೆ ಯೋಗ್ಯವಾಗಿರಿಸಲಾಗುತ್ತಿದೆ.

4) ರಾಷ್ಟ್ರೀಯ ಹೆದ್ದಾರಿ-275 ರ ಕಿ.ಮೀ. 237.00 ರಿಂದ ಕಿ.ಮೀ 263.00 ತನಕ (ಮಾರನಹಳ್ಳಿಯಿಂದ - ಅಡ್ಡಹೊಳೆಯವರೆಗೆ) 2018-19ನೇ ಸಾಲಿನಲ್ಲಿ ಸುರಿದ ಭಾರಿ ಮಳೆಗೆ ಸುಮಾರು 21 ಸ್ಥಳಗಳಲ್ಲಿ ಭೂಕುಸಿತವಾಗಿದ್ದು, ಸದರಿ ಸ್ಥಳಗಳಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿಗೆ ಕೇಂದ್ರ ಭೂಸಾರಿಗೆ ಇಲಾಖೆ ವತಿಯಿಂದ ರೂ.26,26,55,220.00 ಮೊತ್ತಕ್ಕೆ ಮಂಜೂರಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದ್ದು, ಪೂರ್ಣಗೊಳ್ಳುವ ಹಂತದಲ್ಲಿದ್ದು, ಭೌತಿಕವಾಗಿ ಶೇಕಡ 75ರಷ್ಟು ಕಾಮಗಾರಿ ಪೂರ್ಣಗೊಂಡಿರುತ್ತದೆ. ಸದರಿ ರಸ್ತೆಯಲ್ಲಿ ಪಿ.ಬಿ.ಎಂ.ಸಿ. ಯೋಜನೆಯಡಿಯಲ್ಲಿ ಮುಂದಿನ ಐದು ವರ್ಷಗಳವರೆಗೆ (2023 ರಿಂದ 2028 ರವರೆಗೆ) ಅಭಿವೃದ್ಧಿ ಮತ್ತು ನಿರ್ವಹಣಾ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

5) ರಾಷ್ಟ್ರೀಯ ಹೆದ್ದಾರಿ-275 ರ ಸಂಪಾಜೆ ಘಾಟ್ ರಸ್ತೆ ಸರಪಳಿ ಕಿ.ಮೀ.71.600 ರಿಂದ (ಸಂಪಾಜೆಗ್ರಾಮ) ಕಿ.ಮೀ.93.200 (ಕಾಟಕೇರಿಗ್ರಾಮ) ರವರೆಗೆ ಒಟ್ಟು 21.600 ಕಿ.ಮೀ.ವರೆಗೆ 2023-24 ನೇ ಸಾಲಿನಲ್ಲಿ ನಿಯತಕಾಲಿಕ ನವೀಕರಣ (ಕೇಂದ್ರ) ಯೋಜನೆಯಡಿ ಡಾಂಬರೀಕರಣ ಕಾಮಗಾರಿಗೆ ರೂ.20.06 ಕೋಟಿ

ಮೊತ್ತಕ್ಕೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಮಂತ್ರಾಲಯದಿಂದ ಅನುಮೋದನೆಗೊಂಡಂತೆ, ದಿನಾಂಕ:20.06.2024 ರಂದು ಪೂರ್ಣಗೊಳಿಸಿ, ಸಂಪಾಜೆ ಘಾಟ್‌ನ ಭಾಗವನ್ನು ಯಾವುದೇ ಅಡೆತಡೆಗಳಿಲ್ಲದೆ ರಸ್ತೆ ಸಂಚಾರಕ್ಕೆ ಯೋಗ್ಯವಾಗಿರಿಸಲಾಗಿದೆ. ಉಳಿದಂತೆ ಕಿ.ಮೀ 93.20 ರಿಂದ ಕಿ.ಮೀ 132.314 ರವರೆಗಿನ ಭಾಗದಲ್ಲಿ 2021–22 ನೇ ಸಾಲಿನಲ್ಲಿ ರಸ್ತೆ ಬಲಪಡಿಸುವ ಕಾಮಗಾರಿ ಮುಕ್ತಾಯಗೊಂಡಿದ್ದು, ಪ್ರಸ್ತುತ ಸದರಿ ಭಾಗವು ಡಿ.ಎಲ್.ಪಿ. ಯಲ್ಲಿರುತ್ತದೆ. ಹಾಗೂ ಭಾರಿ ಭೂಕುಸಿತಗೊಳ್ಳಬಹುದಾದ ಸರಪಳಿಗಳನ್ನು ಗುರುತಿಸಿ, ಜೆ.ಸಿ.ಬಿ & ಹಿಟಾಚಿ ಯಂತ್ರಗಳು, ಟಿಪ್ಪರ್, ಟ್ರಾಕ್ಟರ್ ಮತ್ತು ಕಾರ್ಮಿಕರುಗಳ ತಂಡಗಳನ್ನು (ಮೊಬೈಲ್ ಗ್ಯಾಂಗ್) ಸಂಪಾಜೆಘಾಟ್ ಭಾಗದಲ್ಲಿನ ಹೆದ್ದಾರಿಗೆ ನಿಯೋಜಿಸಲಾಗಿದ್ದು ತಕ್ಷಣವೇ ದುರಸ್ತಿ ಕಾರ್ಯವನ್ನು ಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯವಾಗಿರಿಸಲಾಗುತ್ತಿದೆ.

6) **ಕಿ.ಮೀ 33.00 ರಿಂದ ಕಿ.ಮೀ 41.00 ರವರೆಗೆ ಆಗುಂಬೆ ಘಾಟ್ ರಾಷ್ಟ್ರೀಯ ಹೆದ್ದಾರಿ–169ಎ:**
2024–25ನೇ ಸಾಲಿನ ವಾರ್ಷಿಕ ಯೋಜನೆಯಡಿ ಆಗುಂಬೆ ಘಾಟ್ ರಸ್ತೆಯನ್ನು ಅಭಿವೃದ್ಧಿಗೊಳಿಸಲು (ಅಗಲೀಕರಣ ಇತ್ಯಾದಿ) ರೂ.403.00 ಕೋಟಿ ಮೊತ್ತಕ್ಕೆ ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದಿಂದ ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತುತ, ವಿಸ್ತೃತ ಯೋಜನಾ ವರದಿ ತಯಾರಿಸಲು ಸಮಾಲೋಚಕರನ್ನು (Consultancy) ನೇಮಿಸಲು ಟೆಂಡರ್ ಆಹ್ವಾನಿಸಲಾಗಿರುತ್ತದೆ.

7) **ಕಿ.ಮೀ 28.00 ರಿಂದ ಕಿ.ಮೀ 43.40 ರವರೆಗೆ ನಿಟ್ಟೂರು (ನಾಗೋಡಿ ಘಾಟ್) ರಾಷ್ಟ್ರೀಯ ಹೆದ್ದಾರಿ–766ಸಿ:**
ರಾಷ್ಟ್ರೀಯ ಹೆದ್ದಾರಿ–766ಅ ರಸ್ತೆಯ ಅಭಿವೃದ್ಧಿಗಾಗಿ 2022–23ನೇ ಸಾಲಿನಲ್ಲಿ ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ರೂ.394.95 ಕೋಟಿಗಳಿಗೆ ಅನುಮೋದನೆಗೊಂಡಿದ್ದು, (ಸರಪಳಿ ಕಿ.ಮೀ 0.00 ರಿಂದ 37.80 ಕಿ.ಮೀ ವರೆಗೆ) ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಗುತ್ತಿಗೆ ಕರಾರು ಒಪ್ಪಂದದ ನಂತರ ನಿಟ್ಟೂರು (ನಾಗೋಡಿ ಘಾಟ್) ಭಾಗದಲ್ಲಿ ಬರುವ ಸರಪಳಿಯಲ್ಲಿ ಅವಶ್ಯಕವಿರುವ ಕೆಲಸಗಳನ್ನು ನಿರ್ವಹಿಸಲಾಗುವುದು.

8) **ಕಿ.ಮೀ 123.00 ರಿಂದ 153.00 ಮಾಳಾಘಾಟ್ ರಾಷ್ಟ್ರೀಯ ಹೆದ್ದಾರಿ– 169:**
2024–25ನೇ ಸಾಲಿನ ವಾರ್ಷಿಕ ಯೋಜನೆಯಡಿ ಮಾಳಾಘಾಟ್ ರಸ್ತೆಯನ್ನು ಅಭಿವೃದ್ಧಿಗೊಳಿಸಲು (ಅಗಲೀಕರಣ ಇತ್ಯಾದಿ) ರೂ.438.00 ಕೋಟಿ ಮೊತ್ತಕ್ಕೆ ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯದಿಂದ ಅನುಮೋದನೆ ನೀಡಲಾಗಿರುತ್ತದೆ. ಪ್ರಸ್ತುತ, ವಿಸ್ತೃತ ಯೋಜನಾ ವರದಿ ತಯಾರಿಸಲು ಸಮಾಲೋಚಕರನ್ನು (Consultancy) ನೇಮಿಸಲಾಗಿದ್ದು, ಆಲೈನ್‌ಮೆಂಟ್ ಅನುಮೋದನೆಯಾಗಿದ್ದು, ಡಿ.ಪಿ.ಆರ್. ಅನುಮೋದನೆ ಹಂತದಲ್ಲಿದೆ.

ಸದರಿ 3 ಘಾಟ್ ರಸ್ತೆಗಳಲ್ಲಿ ಮಳೆಗಾಲ ಪೂರ್ವ/ಮಳೆಗಾಲದಲ್ಲಿ ನಿರಂತರವಾಗಿ ಜಂಗಲ್ ತೆಗೆಯುವುದು, ಚರಂಡಿ ಸ್ವಚ್ಛಗೊಳಿಸುವುದು, ಇತ್ಯಾದಿ ನಿರ್ವಹಣೆ (STMC) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ವಾಹನಗಳ ಸುಗಮ ಸಂಚಾರಕ್ಕೆ ಯಾವುದೇ ರೀತಿಯಲ್ಲೂ ತೊಂದರೆ ಆಗದಂತೆ ಕ್ರಮವಹಿಸಲಾಗಿರುತ್ತದೆ/ಈಗಲೂ ಸಹ ಕ್ರಮವಹಿಸಲಾಗುತ್ತಿದೆ.

## ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ:

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರರವರಿಂದ ಪಡೆದ ಮಾಹಿತಿಯಂತೆ ರಾಷ್ಟ್ರೀಯ ಹೆದ್ದಾರಿ–75ರ ಹಾಸನ– ಮಾರನಹಳ್ಳಿ ಸೆಕ್ಷನ್‌ನಲ್ಲಿ ದೊಡ್ಡತಪ್ಪಲು ಹತ್ತಿರ ಮತ್ತು ರಾಷ್ಟ್ರೀಯ ಹೆದ್ದಾರಿ–766(ಇ) ರ ದೇವಿಮನೆ ಹತ್ತಿರ 2024ರ ಮಳೆಗಾಲದಲ್ಲಿ ಭೂಕುಸಿತ ಉಂಟಾಗಿದ್ದು, ಭೂಕುಸಿತ ಉಂಟಾಗಿರುವ ಭಾಗದಲ್ಲಿ NHAI ವತಿಯಿಂದ ಇಳಿಜಾರು ರಕ್ಷಣಾ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.

## ರಾಷ್ಟ್ರೀಯ ಹೆದ್ದಾರಿ ಉತ್ತರ ವಲಯ:

ರಾಷ್ಟ್ರೀಯ ಹೆದ್ದಾರಿ ಉತ್ತರ ವಲಯ ವ್ಯಾಪ್ತಿಯಲ್ಲಿ ಬರುವ ಅರಬೈಲ ಘಾಟ್ ಮತ್ತು ಗೇರುಸೊಪ್ಪ ಘಾಟ್ ರಸ್ತೆಗಳಲ್ಲಿ ಮಳೆಗಾಲದಲ್ಲಿ ಭೂ–ಕುಸಿತದಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕಾಲಕಾಲಕ್ಕೆ ಸೂಕ್ತ ನಿಗಾ ಇಟ್ಟುಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ.

- 2023–24 ನೇ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿ–52 ರಲ್ಲಿ ಅರಬೈಲ ಘಾಟ್ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರದಿಂದ ರೂ.31.90 ಕೋಟಿ ಮೊತ್ತದ ಅನುದಾನ ದೊರೆತಿದ್ದು, ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಮಾರ್ಚ್–2025 ರವರೆಗೆ 10 ಕಿ.ಮೀ ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗುವುದು.
- 2024–25ನೇ ಸಾಲಿನಲ್ಲಿ ರಾಷ್ಟ್ರೀಯ ಹೆದ್ದಾರಿ–69 ರಲ್ಲಿ ಗೇರುಸೊಪ್ಪ ಘಾಟ್ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರದಿಂದ ರೂ.50.08 ಕೋಟಿ ಮೊತ್ತದ ಅನುದಾನ ದೊರೆತಿದ್ದು, ಕಾಮಗಾರಿಯು ಟೆಂಡರ್ ಹಂತದಲ್ಲಿದೆ.

## ಸಂಪರ್ಕ ಮತ್ತು ಕಟ್ಟಡ, ಉತ್ತರ ವಲಯ, ಧಾರವಾಡ:

ಈ ವಲಯ ವ್ಯಾಪ್ತಿಯಲ್ಲಿ ಘಾಟ್‌ಗಳ ವ್ಯಾಪ್ತಿಯಲ್ಲಿ ಅತೀ ಮಳೆಯಾದಲ್ಲಿ ಸಣ್ಣ ಪ್ರಮಾಣದ ಭೂಕುಸಿತ ಸಂಭವಿಸುತ್ತಿದ್ದು, ವಾರ್ಷಿಕ ರಸ್ತೆ ನಿರ್ವಹಣೆಯಡಿ ಕಾಮಗಾರಿ ಕೈಗೊಂಡು ಸಾರ್ವಜನಿಕರಿಗೆ ತೊಂದರೆಯಾಗದಂತೆ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

## ಸಂಪರ್ಕ ಮತ್ತು ಕಟ್ಟಡ, ಕೇಂದ್ರ ವಲಯ, ಶಿವಮೊಗ್ಗ:

ಈ ವಲಯ ವ್ಯಾಪ್ತಿಯಲ್ಲಿ ಎಲ್ಲಾ ಘಾಟಿ ರಸ್ತೆಗಳು ಸುಸ್ಥಿತಿಯಲ್ಲಿದ್ದು, ವಾಹನ ಸಂಚಾರಕ್ಕೆ ಯಾವುದೇ ತೊಂದರೆಯಾಗಿರುವುದಿಲ್ಲ. ಪ್ರಸಕ್ತ 2024–25ರ ಸಾಲಿನಲ್ಲಿ ಲೆಕ್ಕಶೀರ್ಷಿಕೆ:3054ರಡಿ ಬಿಡುಗಡೆಯಾದ ಅನುದಾನಕ್ಕೆ ತಕ್ಕಂತೆ ಸದರಿ ಘಾಟಿ ಪ್ರದೇಶದಲ್ಲಿ ವಾಹನ ಸಂಚಾರಕ್ಕೆ ವ್ಯತ್ಯಯವಾಗುವುದನ್ನು ತಪ್ಪಿಸಲು ಸುರಕ್ಷತಾ ಕ್ರಮಗಳನ್ನು ಹಾಗೂ ಅಗತ್ಯ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ. ಈ ಘಾಟಿ ಪ್ರದೇಶಗಳಲ್ಲಿ ಯಾವುದೇ ಭೂಕುಸಿತವಾಗಿರುವುದಿಲ್ಲ ಹಾಗೂ ಭೂ–ಕುಸಿತದಿಂದ ರಸ್ತೆಗಳೂ ಬಂದ್ ಆಗಿರುವುದಿಲ್ಲ.

## ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (SHDP):

- ಹಂತ–04 ಘಟ್ಟ–01 ರಡಿಯಲ್ಲಿ ಪ್ಯಾಕೇಜ್–278 ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕು ಬೆಂಗಳೂರು–ಜಾಲ್ಸೂರು ರಾಜ್ಯ ಹೆದ್ದಾರಿ–85 ರ ಸರಪಳಿ 254.14 ಕಿ.ಮೀ. ರಿಂದ 294.88 ಕಿ.ಮೀ. ವರೆಗೆ (ಮಾರ್ಗ: ಗೊಡ್ಡು, ವನಗೂರು, ಕೂಡು ರಸ್ತೆ, ಪಟ್ಲ, ಬಿಸಲೆ, ಬಿಸಲೆ ಘಾಟ್, ಸುಬ್ರಹ್ಮಣ್ಯ) (ಆಯ್ದ ಭಾಗಗಳಲ್ಲಿ) ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ ಪೂರ್ಣಗೊಂಡಿದೆ. ಅಂದಾಜು ಮೊತ್ತ: ರೂ.1200.00 ಲಕ್ಷಗಳು.

- ಹಂತ–04, ಘಟ್ಟ–02, ಪ್ಯಾಕೇಜ್–538 (ಬಿ) ಕಾಮಗಾರಿಯಲ್ಲಿ ಬೆಂಗಳೂರು–ಜಾಲ್ಸೂರು ಸರಪಳಿ: 291.51 ಕಿ.ಮೀ ರಿಂದ 337.91 ಕಿ.ಮೀ ರವರೆಗೆ (ಆಯ್ಧ ಭಾಗಗಳಲ್ಲಿ) ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಯು ಮಂಜೂರಾತಿಗೊಂಡಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಅಂದಾಜುಮೊತ್ತ: ರೂ.1375.00 ಲಕ್ಷಗಳು.
- ಕಾಮಗಾರಿಯಲ್ಲಿ ಒಟ್ಟು 10.210 ಕಿ.ಮೀ. ಉದ್ದದ ರಸ್ತೆಯಲ್ಲಿ 5.68 ಕಿ.ಮೀ ರಸ್ತೆಯು ಪೂರ್ಣಗೊಂಡಿದ್ದು, ಉಳಿದ 4.53 ಕಿ.ಮೀ ರಸ್ತೆಯು ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಹಾದು ಹೋಗುತ್ತಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.